ಗೆಲ್ಲಬೇಕು ಎಂಬ ಭಾವನೆ ಮೂಡಿಬಂದು ಅವರೂ ಕೂಡ ಕೆಲಸ ಮಾಡಲು ಅನುಕೂಲವಾಗುತ್ತದೆ ಮತ್ತು ಡಿಸಿಪ್ಲಿನ್ ಬರುತ್ತದೆ. ಹಾಗಾಗಿ ಈ ಪಂಚಾಯ್ತಿಗಳಿಗೆ ಪಕ್ಷಾಧಾರಿತ ಚುನಾವಣೆ ನಡೆಸಿದರೆ ಮಾತ್ರ ಇದಕ್ಕೊಂದು ವ್ಯವಸ್ಥಿತ ರೂಪ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಪಂಚಾಯ್ತಿಗಳಿಗೆ ನೀವು ಅಧಿಕಾರ ಹೆಚ್ಚಿಗೆ ಕೊಡಬೇಕು ಎನ್ನುತ್ತೀರಿ. ಮಾನ್ಯ ರವಿಯವರು ಇಲ್ಲ ಇವತ್ತು, ನಕ್ಸಲ್‌ವಾದಿಗಳ ಸಮಸ್ಯೆ, ಕುದುರೆಮುಖದ ನೆಲ್ಲಿಬೀಡು ಪ್ರದೇಶದ ಗ್ರಾಮ ಪಂಚಾಯ್ತಿಯವರು ಅಲ್ಲಿ ಗಣಿಗಾರಿಕೆಗೆ ಅವಕಾಶ ಇರಬಾರದು ಅಂತ ನಿರ್ಣಯ ಮಾಡಿದರು. ಅದೇ ತರಹ ಕೇರಳದಲ್ಲಿ ಪೆಪ್ಸಿಕೋಲ ಏನು ನೀರನ್ನು ಸಂಪೂರ್ಣ ಎತ್ತಿಹಾಕಿ ಇಡೀ ಕೇರಳವನ್ನು ಸಂಪೂರ್ಣ ಬಂಜರು ಮಾಡಿದೆ, ಅಲ್ಲಿಯ ಗ್ರಾಮ ಪಂಚಾಯ್ತಿ ಕೂಡ ಅವರಿಗೆ ಎತ್ತಲಿಕ್ಕೆ ಅವಕಾಶವಿಲ್ಲ ಅಂತ ನಿರ್ಣಯ ಮಾಡಿದರು. ಮುಂದೆ ಅದು ಹೈಕೋರ್ಟ್‌ಗೆ ಹೋಯಿತು, ಹೈಕೋರ್ಟ್‌ನವರು ಗ್ರಾಮಪಂಚಾಯ್ತಿಯವರು ಮಾಡಿದ ನಿರ್ಣಯವನ್ನು ಎತ್ತಿಹಿಡಿದರು. ಅದೇ ತರಹ ಗೋವಾದಲ್ಲಿ 10 ವರ್ಷಗಳ ಹಿಂದೆ, . . .

7. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ಬೇಡಿಕೆಗಳ ಮೇಲೆ ಚರ್ಚೆ ನಡೆಯುವಾಗ ಮೊದಲನೇ ಸಾಲಿನಲ್ಲಿ ಮಂತ್ರಿಗಳಿಲ್ಲದಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಬಂದ ಮೇಲೆ ಸರ್ಕಾರಿ ನೌಕರರಿಗೆ ಸಂಬಳ ಕೊಟ್ಟಿರಬಹುದು, ವರ್ಗಾವಣೆ ಮಾಡಿರಬಹುದು, ಈಗ ಇಷ್ಟು ಪ್ರಮುಖ ವಿಷಯಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಮೊದಲನೇ ಸಾಲಿನಲ್ಲಿ ಯಾರೂ ಇಲ್ಲ. ಇಷ್ಟು ಹಗುರವಾಗಿ ಸದನವನ್ನು ಇವರು ತೆಗೆದುಕೊಂಡು ಹೇಗೆ ಬೇಕಾದರೂ ನಾವು ಆಡಳಿತ ನಡೆಸಬಹುದು, ಎಲ್ಲಕ್ಕೂ ಪ್ರತಿಪಕ್ಷದವರು ಬಗ್ಗುತ್ತಾರೆ, ನಾವು ಹೇಳಿದಂತೆ ಕೇಳುತ್ತಾರೆ ಎಂಬ ಭಾವನೆ ಅವರ ಬಳಿ ಇದೆ. ಅದಕ್ಕೋಸ್ಕರ ಈಗ ನಾನು ಪ್ರತಿಪಕ್ಷದ ಮುಖಂಡರೊಡನೆ ಸಮಾಲೋಚನೆ ಮಾಡಿದ್ದೇನೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಮಾಡುತ್ತಿರುವ ಅಪಮಾನ. ಇವರು ಯಾವುದನ್ನೂ ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಿಲ್ಲ. ಯಾವುದೇ ಒಬ್ಬ ಸಚಿವರು ಅಭಿವೃದ್ಧಿ ಕಾರ್ಯ ನೋಡಲು ಹೋಗಲಿಲ್ಲ. ನೀರಾವರಿ ಸಚಿವರು ಕಳೆದ 14 ತಿಂಗಳಲ್ಲಿ ಕಾವೇರಿ ಕೃಷ್ಣ ಬೇಸಿನ್‌ಗೆ ಮೂರ್ನಾಲ್ಕು ಸಾರಿ ಹೋಗಿಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಅಧಿಕಾರಿಗಳ ಕಿವಿಗಾದರೂ ಬಿದ್ದು ಏನಾದರೂ ಸುಧಾರಣೆಯಾಗಬಹುದು ಅಂತ ಎಲ್ಲಾ ಮಂತ್ರಿಗಳು ಇದ್ದಾಗ ಐದು ನಿಮಿಷ ಮಾತನಾಡೋಣ ಅಂತ ಐದಾರು ಪಾಯಿಂಟ್‌ಗಳನ್ನು ತಂದೆ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಯಾವುದೋ ಕಾರಣಕ್ಕೆ ಹೋಗಿದ್ದರು. ಅವರು ಹೆಚ್ಚು ಹೊತ್ತು ಕುಳಿತುಕೊಳ್ಳುತ್ತಾರೆ ಎಂದು ನಾನು ಮಾತನಾಡಲು ಹೋಗುವುದಿಲ್ಲ. ಹೀಗೆ ಮೊದಲನೇ ಸಾಲಿನಲ್ಲಿ ಯಾರೂ ಕುಳಿತುಕೊಳ್ಳದೆ ಇರುವುದು ನಮಗೆ ಮಾಡುತ್ತಿರುವ ಅಪಮಾನ ಅಂತ ಭಾವಿಸಿಕೊಂಡು ಇದನ್ನು ಬಹಿಷ್ಕಾರ ಮಾಡಿ ನಾವು ಹೊರಗಡೆ ಹೋಗುತ್ತೇವೆ. ಅವರೇ ಉತ್ತರ ಕೊಟ್ಟುಕೊಳ್ಳಲಿ. ಯಾವುದೇ ಕಾರಣಕ್ಕೂ ಇನ್ನು ಮುಂದೆ ಕೋಆಪರೇಟ್ ಮಾಡಲು ನಾವು ರೆಡಿಯಿಲ್ಲ. ಆಡಳಿತ ಕುಲಗೆಟ್ಟುಹೋಗಿದೆ, ಸರ್ಕಾರ ಸತ್ತುಹೋಗಿದೆ, ಸರ್ಕಾರ ಇದೆ ಅಂತ ಜನರಿಗೂ ಅನಿಸುತ್ತಾ ಇಲ್ಲ, ಅವರ ಹೊಡೆದಾಟ ಬಡಿದಾಟಗಳಲ್ಲಿ ತಲ್ಲೀನರಾಗಿರಬೇಕಾದರೆ . . . . .

(ಗೊಂದಲ)

ಅಧ್ಯಕ್ಷರು: ನೀರಾವರಿ ಸಚಿವರು ಬಂದರು, ಕೌನ್ಸಿಲ್‌ನಲ್ಲೂ ಉತ್ತರ ನಡೆಯುತ್ತಿದೆ, ಅದಕ್ಕೋಸ್ಕರ ಮಾನ್ಯ ಸಚಿವರು ಅಲ್ಲಿಗೆ ಹೋಗಿರುತ್ತಾರೆ.

(ಗೊಂದಲ)

(ಬಿಜೆಪಿ ಮತ್ತು ಜೆಡಿಯು ಪಕ್ಷಗಳ ಸದಸ್ಯರು ಹಾಗೂ ಶ್ರೀ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡುವರು)

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಫ್ರಂಟ್‌ಲೈನ್‌ನಲ್ಲಿ ಇವತ್ತು ಯಾರ ಯಾರ ಸಬ್ಜೆಟ್ಟಿತ್ತು ಅವರೆಲ್ಲರೂ ಇರಬೇಕು. ನನ್ನದು ನೀರಾವರಿ, ಸಾರಿಗೆ, ಪ್ರಕಾಶರದ್ದು ರೆವಿನ್ಯೂ, ಉಳಿದವರೆಲ್ಲಾ ಫಾರೆಸ್ಟ್, ಪಶುಸಂಗೋಪನೆ ಎಲ್ಲರೂ ಇಲ್ಲೇ ಇದ್ದಾರೆ. ಎರಡನೇ ಲೈನ್‌ನಲ್ಲಿರುವವರು ಫ್ರಂಟ್‌ಗೆ ಬಂದು ಕೂರಲು ಆಗುತ್ತದೆಯೆ? ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದ ಪವರ್ ಮೀಟಿಂಗ್‌ಗೆ ಹೋಗಿದ್ದಾರೆ ಅವರಿಗೆಲ್ಲಾ ಗೊತ್ತಿದೆ. ಮಾನ್ಯ ಸಿದ್ದರಾಮಯ್ಯನವರು ಪಾಪ, ಕಾಲುನೋವಿದೆ ಅಂತ ಪರ್ಮಿಶನ್ ತೆಗೆದುಕೊಂಡು ಅವರು ಬಂದಿಲ್ಲ. ಪ್ರಕಾಶ್‌ರವರು ಇಲ್ಲೇ ಇದ್ದರು. ಆ ಮನೆಯಲ್ಲಿ ಒಂದು ಬಿಲ್ ಇದೆ ಅಂತ ಅಲ್ಲಿದ್ದಾರೆ, ನಾನು ಇಲ್ಲೇ ಕುಳಿತಿದ್ದೆ; ನೀರು ಕುಡಿಯುವುದಕ್ಕೆ ಹೊರಗಡೆ ಹೋಗಿ ಈಗ ಪುನಃ ಬಂದೆ. ಇದೇ ಕುಂಟುನೆಪ ಮಾಡಿ ಅವರು ನಮ್ಮ ಉತ್ತರ ಕೇಳದೆ ಹಾಗೇ ಪಲಾಯನ ಆಗುವುದು ಯಾಕೆ? ನೀವು ಟೀಕೆ ಮಾಡಿದ್ದೀರಿ, ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ, ಕೆಲವು ಕೆಲಸಗಳನ್ನು ಮಾಡಬೇಕು ಅಂದಿದ್ದೀರಿ. ಅವುಗಳಿಗೆ ಉತ್ತರ ಪಡೆದುಕೊಳ್ಳಬೇಕಲ್ಲ? ಅದಕ್ಕೆ ಅವರು ತಯಾರಿಲ್ಲ, ನೀವು ಟೀಕೆ ಮಾಡಿದ್ದಕ್ಕೆ ಪ್ರತಿ ಉತ್ತರ ಕೇಳಲು ನಿಮಗೆ ತಾಳ್ಮೆ ಇಲ್ಲ. ಆದರೆ ಸುಮ್ಮನೆ ಹೇಳುವುದು ನಾಚಿಕೆ ಬರಬೇಕು, ಸರ್ಕಾರ ಇಲ್ಲ, ಸತ್ತುಹೋಗಿದೆ ಇದೇ ಹೇಳಿಕೊಂಡು ಹೋದರೆ ಹೇಗೆ? ನಾವು ಎಷ್ಟೋ ಸಲ ನೋಡಿಲ್ಲವೆ? ಇವತ್ತು 10–15 ಇಲಾಖೆ ಇದ್ದರೂ ಎಲ್ಲಾ ಮಂತ್ರಿಗಳು ಇಲ್ಲಿದ್ದಾರೆ. ತಾವೇ ಹೇಳಿದಿರಿ, ಮಧ್ಯಾಹ್ನ 3–30ಕ್ಕೆ ಉತ್ತರ ಅಂತ, ನಾವು ರೆಡಿ ಮಾಡಿಕೊಂಡು ಉತ್ತರ ಹೇಳಲು ಬಂದಿದ್ದೇವೆ. ಉಳಿದ ಎಲ್ಲಾ ಸಚಿವರು 15 ನಿಮಷವೋ ಅರ್ಧ ಗಂಟೆಯೋ ನೀವು ಎಷ್ಟು ಸಮಯ ಕೊಡುತ್ತೀರಿ ಅಷ್ಟು ಸಮಯದಲ್ಲಿ ಹೇಳುವುದಕ್ಕೆ ಅವರೂ ಬಂದರು. ಅದನ್ನು ಕೇಳಲು ತಾಳ್ಮೆ ಇಲ್ಲ ಅಂದರೆ ಕಷ್ಟವಾಗುತ್ತದೆ. ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ; ನಮ್ಮ ಉತ್ತರ ಕೇಳದೆ ಬರೀ ಅವರು ಹೇಳಿದ್ದು ಮಾತ್ರ ಮಾಧ್ಯಮದಲ್ಲಿ ಬರಬೇಕು, ಸಭಾತ್ಯಾಗ ಮಾಡಿ ಹೋಗಬೇಕು ಎಂಬ ಸಂಚನ್ನು ಮಾಡಿ ಹೋಗಿದ್ದಾರೆ. ಇದು ಸರಿಯಲ್ಲ. ಯಾವುದೇ ಪ್ರಜಾತಂತ್ರ ನೀತಿಗೆ, ತತ್ವಕ್ಕೆ ವಿರುದ್ಧವಾದ ಧೋರಣೆಯನ್ನು ಅವರು ತಾಳಿದ್ದಾರೆ. ದಯವಿಟ್ಟು ಇಂತಹ ಧೋರಣೆ ತಾಳಬಾರದು. ತಾಳ್ಮೆಯಿಂದ ನಾವು ಅವರ ಮಾತು ಕೇಳಿದ್ದೇವೆ, ಬೈಸಿಕೊಂಡಿದ್ದೇವೆ, ಆಡಬಾರದಂಥ ಅನೇಕ ಮಾತುಗಳನ್ನೂ ಇಲ್ಲಿ ಆಡಿದ್ದಾರೆ. ಅದನ್ನೆಲ್ಲಾ ನಾವು ತಾಳಿಕೊಂಡು ಕುಳಿತಿದ್ದೇವೆ. ನೀವು ಒಂದೇಟು ಕೊಟ್ಟರೆ ನಾವು ಪ್ರತಿಯೇಟು ಕೊಡುತ್ತೇವೆ ಎಂದಾಗ ಓಡಿಹೋಗುವುದು ಯಾಕೆ? ಅವರುಗಳು ಕೂಡಬೇಕು, ಕೇಳಲಿ. ಅವರು ದಯವಿಟ್ಟು ಈ ರೀತಿಯಾಗಿ ಮಾಡಬಾರದು. ಅವರು ಹೊರಗಡೆ ಹೋಗಿದ್ದಾರೆಂದರೆ ಅವರಿಗೆ ಉತ್ತರ ಬೇಕಾಗಿಲ್ಲ. ಮತ್ತೆ ಸಮಸ್ಯೆ ಕೂಡ ಪರಿಹಾರವಾಗಬೇಕಾಗಿಲ್ಲ. ಅಥವಾ ನಾವೇನು ಹೇಳುತ್ತೇವೆ, ನಮ್ಮ ಯೋಜನೆಗಳೇನು, ನಾವೇನು ಮಾಡುತ್ತೇವೆ ಎನ್ನತಕ್ಕಂಥದ್ದು ಈ ಸದನದ

ಮುಖಾಂತರ ಜನರಿಗೆ ತಲುಪಬಾರದು ಎನ್ನತಕ್ಕದ್ದು ಅವರ ಉದ್ದೇಶ ಇದೆ. ಆದರೆ ನಾವು ಅದನ್ನು ಎಲ್ಲಿ ಹೇಳಬೇಕೋ ಅಲ್ಲಿ ಅದನ್ನು ಹೇಳಿಯೇ ಹೇಳುತ್ತೇವೆ. ಆದರೆ ಇಲ್ಲಿ ಹೇಳಲಿಲ್ಲವೆಂದರೆ ಅದನ್ನು ಹೊರಗಡೆ ಹೇಳುತ್ತೇವೆ. ಅಂದರೆ ನಾವು ಏನು ಮಾಡಿದ್ದೇವೆ ಎಂದು. ಆದರೆ ಸದನದಲ್ಲಿ ಹೇಳಿದ್ದರೆ ಅದಕ್ಕೆ ಒಂದು ಬೆಲೆ ಬರುವುದು. ಅದಕ್ಕೆ ಒಂದು ಹೆಚ್ಚಿನ ಶಕ್ತಿ ಮಹತ್ವ ಇರುತ್ತಿತ್ತು. ಆದರೆ ಅದಕ್ಕೆ ಬೇಕೆಂದೇ ಅವರು ಆ ಒಂದು ಮಾತನ್ನು ನಿಲ್ಲಿಸಬೇಕು ಅಥವಾ ತಡೆಹಿಡಿಯಬೇಕು ಎನ್ನತಕ್ಕ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ. ಇದನ್ನು ನಾನು ಖಂಡಿಸುತ್ತೇನೆ. ಈ ರೀತಿಯಾಗಿ ಯಾರೂ ಕೂಡ ಮಾಡಬಾರದು ಎನ್ನತಕ್ಕಂಥದ್ದನ್ನು ತಮ್ಮ ಮುಖಾಂತರ ಸ್ಪಷ್ಟಪಡಿಸುತ್ತೇನೆ.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ(ಆಗೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲಾ ಒಳ್ಳೆಯ ಚರ್ಚೆ ನಡೆದು ನಿನ್ನೆ ಮೊನ್ನೆ ಬಹುಶಃ ಸ್ವೀಕರ್‌ರವರು ಇಷ್ಟೊಂದು ಯಾವ ಸದನದಲ್ಲೂ ಅವಕಾಶವನ್ನು ಕೊಟ್ಟಿಲ್ಲ. ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು ಉತ್ತರ ಹೇಳುವ ಸಂದರ್ಭದಲ್ಲಿ ಹೊರಗಡೆ ಹೋದರೆ ಹೇಗೆ? ಇದು ಸೂಕ್ತವಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದವರು ಮಾತನಾಡುವಾಗ ಅವರು ಹೊರಗಡೆ ಹೋಗುತ್ತಾರೆ. ಅವರು ಮಾತನಾಡುವಾಗ ನಾವು ಕೇಳಲಿಲ್ಲವೇ? ಇವರ ಧೋರಣೆ ಏನು? ನಾವೆಲ್ಲಾ ಕುಳಿತು ಕೇಳಿದ್ದೇವೆ. ನನಗೆ ತಿಳಿದ ಮಟ್ಟಿಗೆ ಮಾತನಾಡಲು ಎಲ್ಲರಿಗೂ ತಾವು ಅವಕಾಶವನ್ನು ಮಾಡಿಕೊಟ್ಟಿರಿ. ಆದರೆ ದುರ್ದೈವದಿಂದ ನಮ್ಮವರು ಮಾತನಾಡುವುದಕ್ಕೆ ಮುಂಚೆ ಅವರು ಹೊರಗಡೆ ಹೋಗುತ್ತಾರೆಂದರೆ ಏನು?

ಆ) ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದಾಗಿ ಬೆಟ್ಟ ಕುಸಿದು ಹಾರಂಗಿ ಜಲಾಶಯಕ್ಕೆ ತೊಂದರೆ ಉಂಟಾಗಿರುವ ಬಗ್ಗೆ.

ಶ್ರೀ ಬಿ.ಎ. ಜೀವಿಜಯ(ಸೋಮವಾರಪೇಟೆ): ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಗೆ ಬಂದು ನಾನು ಪ್ರಾರ್ಥನೆ ಮಾಡಿದ್ದೆ. ಇವತ್ತು ಪತ್ರಿಕೆಯಲ್ಲಿ ಕೂಡ ಬಂದಿದೆ. ಈ ಕೊಡಗು ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಸೋಮವಾರಪೇಟೆ ತಾಲ್ಲೂಕಿನಲ್ಲಿ ಬಹಳ ಭೀಕರವಾದ ಮಳೆಯಿಂದ ನನ್ನ ಗ್ರಾಮದಲ್ಲಿ ಒಂದು ಬೆಟ್ಟ ಸಂಪೂರ್ಣವಾಗಿ ಒಡೆದು ಅದರಿಂದ ಹಾರಂಗಿ ಜಲಾಶಯಕ್ಕೆ ತೊಂದರೆಯಾಗಿದೆ. ಅದರ ಬಗ್ಗೆ ಡಿ.ಸಿ.ಯವರು ಕೂಡ ಒಂದು ವರದಿಯನ್ನು ಕಳುಹಿಸಿದ್ದಾರೆ. ಇವತ್ತು ನಾನು ಅವರನ್ನು ಕೇಳಿದೆ. 12,154 ಕ್ಯೂಸೆಕ್ಸ್ ನೀರು ನನ್ನ ಗ್ರಾಮದಲ್ಲಿ ಹರಿದು ಹೋಗುತ್ತಿದೆ. ಅದು ಬಿರುಕು ಬಿಟ್ಟು ಇದು ಒಂದು ಅರ್ಧ ಕಿಲೋಮೀಟರ್ ಮಾತ್ರ ಇತ್ತು. ಈಗ ಇದು ಸಾಧಾರಣ ಒಂದೂಕಾಲು ಕಿಲೋಮೀಟರ್ ಅಷ್ಟು ಹೊಳೆಯವರೆಗೆ ಬಿರುಕು ಬಿಟ್ಟಿದೆ. ಈಗ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಕಮಿಟಿ, ಡಿ.ಸಿ. ಅವರೆಲ್ಲಾ ಹೋಗಿ ಚರ್ಚೆಮಾಡಿ ಎಲ್ಲಾ ಗ್ರಾಮದವರನ್ನು ವೆಕೇಟ್ ಮಾಡಿಸಿದ್ದಾರೆ. ಅದೇ ರೀತಿಯಾಗಿ ಬಹಳ ಭೀಕರವಾದ ಮಳೆ ಮುಂದುವರೆದರೆ ಬೆಟ್ಟ ಕುಸಿದು ಆ ಹೊಳೆಗೆ ಅಡ್ಡಕಟ್ಟೆ ಕಟ್ಟಲಿಕ್ಕೆ ಆಗದೇ ಇದು ಒಂದು ರೀತಿ ಆರ್ಟಿಫಿಷಿಯಲ್ ಲೇಕ್ ಆಗಿ ಕ್ರಿಯೇಟ್ ಆಗುತ್ತದೆ. ಅದೇನಾದರೂ ಆ ರೀತಿ ಲೇಕ್ ಆಗಿ ಕ್ರಿಯೇಟ್ ಆದರೆ ಇಗ 15 ಸಾವಿರ